


بسم اللهِ الرّحمٰن الرّحيم

# ಮುಸ್ಲಿಹ್ ಮೌಊದ್ – ವಾಗ್ದಾನ ಮಾಡಲ್ಪಟ್ಟ ಸುಧಾರಕ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **21–02–2025** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ.

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ- بِسْمِ اللّٰهِ الرَّحْمٰنِ الرَّحِيْمِ.

اَلْحَمْدُ لِلّٰهِ رَبِّ الْعَالَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ. اِيَّاكَ نَعْبُدُ وَاِيَّاكَ نَسْتَعِيْنُ.

اِهْدِنَا الصِّرَاطَ الْمُسْتَقِيْمَ. صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ನಿನ್ನೆ ಫೆಬ್ರವರಿ ಇಪ್ಪತ್ತು ಆಗಿತ್ತು. ಈ ದಿನವನ್ನು ಹಝ್ರತ್ ಮುಸ್ಲಿಹ್ ಮೌಊದ್[ರ]ರ ಭವಿಷ್ಯವಾಣಿಗೆ ಸಂಬಂಧಪಟ್ಟು ಜಮಾಅತಿನಲ್ಲಿ ಅರಿಯಲ್ಪಡುತ್ತದೆ. ಅಂದು ಅಥವಾ ಅದರ ಹಿಂದಿನ ಮುಂದಿನ ದಿನಗಳಲ್ಲಿ ಜಮಾಅತಿನಲ್ಲಿ ಜಲ್ಸಗಳು ಕೂಡ ನಡೆಯುತ್ತವೆ. ಈ ಕುರಿತು ಹಝ್ರತ್ ಮಸೀಹ್ ಮೌಊದ್[ಅ]ರ ಒಂದು ದೀರ್ಘವಾದ ಭವಿಷ್ಯವಾಣಿ ಸಹ ಇದೆ. ಅದರಲ್ಲಿ ಪುತ್ರನೊಬ್ಬನ ಜನನ ಮತ್ತು ಆ ಪುತ್ರನ ವೈಶಿಷ್ಟ್ಯಗಳ ಪ್ರಸ್ತಾಪವಿದೆ. ಅದನ್ನು ಕ್ರಿ.ಶ. 1886, ಫೆಬ್ರವರಿ 20ರಂದು ಪ್ರಕಟಣೆ ರೂಪದಲ್ಲಿ ಪ್ರಕಟಿಸಲಾಗಿತ್ತು. ಈ ಭವಿಷ್ಯವಾಣಿಯಲ್ಲಿ ಪುತ್ರನ ವಿಶೇಷತೆಗಳ ಕುರಿತು ದಿವ್ಯವಾಣಿಯ ಪದಗಳಲ್ಲಿ **"ಆತ ಅಪಾರ ಬುದ್ಧಿವಂತ ಮತ್ತು ವಿವೇಕಶಾಲಿ ಆಗಿರುವನು"** ಎಂದೂ **"ಆತನನ್ನು ಬಾಹ್ಯ ಮತ್ತು ಆಂತರಿಕ ಜ್ಞಾನಗಳಿಂದ ತುಂಬಿಸಲಾಗುವುದು"** ಎಂದೂ ಇವೆ. ಅಲ್ಲಾಹನು ಅದರಂತೆ ಹಝ್ರತ್ ಮಸೀಹ್ ಮೌಊದ್[ಅ]ರಿಗೆ ಆ ಗುಣಗಳನ್ನು ಹೊಂದಿದ ಒಬ್ಬ ಪುತ್ರನನ್ನು ದಯಪಾಲಿಸಿದನು. ಅವರ ಹೆಸರು **ಬಶೀರುದ್ದೀನ್ ಮಹ್ಮೂದ್ ಅಹ್ಮದ್** ಎಂದಾಗಿದೆ. ಅವರನ್ನು **ಮುಸ್ಲಿಹ್ ಮೌಊದ್** ಎಂದೂ ಕರೆಯಲಾಗುತ್ತದೆ.

**"ಆ ಬಾಲಕನನ್ನು ಬಾಹ್ಯ ಮತ್ತು ಆಂತರಿಕ ಜ್ಞಾನಗಳಿಂದ ತುಂಬಿಸಲಾಗುವುದು"** ಎಂದು ಭವಿಷ್ಯವಾಣಿಯಲ್ಲಿ ಇರುವ ವಾಕ್ಯಗಳ ಅನುಸಾರ ಅಲ್ಲಾಹನು ಸ್ವತಃ ಅವರ ಬುದ್ಧಿಗೆ ತೀಕ್ಷ್ಣತೆಯನ್ನು ದಯಪಾಲಿಸಿದನು ಮತ್ತು ಜ್ಞಾನಗಳಿಂದ ತುಂಬಿಸಿದನು. ಪ್ರಾಪಂಚಿಕ ವಿಷಯಗಳಲ್ಲಿ ಅವರು ಬಹಳ ದುರ್ಬಲರಾಗಿದ್ದರು. ಆದರೆ ಅಲ್ಲಾಹನು ಅವರಿಂದ ಜ್ಞಾನಪರ, ಧಾರ್ಮಿಕ ಮತ್ತು ಆಡಳಿತಾತ್ಮಕವಾದ ಎಂತಹ ಕೆಲಸಗಳನ್ನು ಮಾಡಿಸಿದನು ಎಂದರೆ ದೊಡ್ಡ ದೊಡ್ಡ ವಿದ್ಯಾವಂತರು ಕೂಡ ಅವರ ಮುಂದೆ ಶಾಲಾ ವಿದ್ಯಾರ್ಥಿಗಳಂತೆ ಅಥವಾ ಮಕ್ಕಳಂತೆ ಭಾಸವಾಗುತ್ತಿತ್ತು. ಅವರ ಐವತ್ತೆರಡು ವರ್ಷಗಳ ಖಿಲಾಫತ್ ಕಾಲಘಟ್ಟ ಅದರ ಸ್ಪಷ್ಟವಾದ ಪುರಾವೆಯಾಗಿದೆ. ಅವರು ಲೋಕದ ಅನೇಕ ವಿಷಯಗಳಲ್ಲಿ ಅಸಂಖ್ಯಾತ ಭಾಷಣಗಳನ್ನು ಮಾಡಿದರು ಮತ್ತು ಲೇಖನಗಳನ್ನು ಬರೆದರು. ಅವರ ಧಾರ್ಮಿಕ ಮತ್ತು ಪವಿತ್ರ ಖುರ್‌ಆನಿನ ಅರಿವಿಗೆ ಯಾವುದೇ ಎಲ್ಲೆಯಿಲ್ಲ. ಅವರು ಪ್ರಾಪಂಚಿಕ ವಿಷಯಗಳಲ್ಲೂ ರಾಷ್ಟ್ರೀಯ ಮತ್ತು ಅಂತರ್‌ರಾಷ್ಟ್ರೀಯವಾದ ರಾಜಕೀಯ ವಿಷಯಗಳಲ್ಲೂ ಭಾಷಣಗಳನ್ನು ಮಾಡಿದರು ಮತ್ತು ಲೇಖನಗಳನ್ನು ಬರೆದರು. ಚಾರಿತ್ರಿಕ ವಿಷಯಗಳಲ್ಲಿ ಅಸಾಧಾರಣ ಮಟ್ಟದ ಲೇಖನಗಳನ್ನು ಬರೆದರು ಮತ್ತು ಭಾಷಣಗಳನ್ನು ಮಾಡಿದರು. ಆರ್ಥಿಕ ವಿಷಯಗಳು ಮತ್ತು ಲೋಕದ ಅನೇಕ ವ್ಯವಸ್ಥೆಗಳ, ಸೋಶಿಯಲಿಸಂ, ಕಮ್ಯೂನಿಸಂ, ಕ್ಯಾಪಿಟಲಿಸಮಿನ ಬಗ್ಗೆಯೂ ಅವರು ವಿಶ್ಲೇಷಣೆ ನಡೆಸಿದರು ಮತ್ತು ಭಾಷಣಗಳನ್ನು ಮಾಡಿದರು. ಅವು ನಂತರ ಪುಸ್ತಕ ರೂಪದಲ್ಲಿಯೂ ಪ್ರಕಟಗೊಂಡುವು. ಇವು ಜಮಾಅತಿನ ಸಾಹಿತ್ಯಗಳಲ್ಲಿ ಲಭ್ಯವಿದೆ. ಮನುಷ್ಯನ ಬುದ್ಧಿ ವಿಸ್ಮಯಗೊಳ್ಳುವಂತಹ ರೀತಿಯಲ್ಲಿ ಯುದ್ಧ ಮತ್ತು ಸೇನಾ ವಿಷಯಗಳಲ್ಲಿ ಹಾಗೂ ವಿಜ್ಞಾನ ಮತ್ತು ಜ್ಞಾನಪರವಾದ ವಿಷಯಗಳಲ್ಲಿ ಕೂಡ ಅರಿವಿನ ಸಂಗತಿಗಳನ್ನು ಅವರು ವಿವರಿಸಿರುವರು.

ನಾನು ಕೇವಲ ಪರಿಚಯ ಎಂಬ ರೀತಿಯಲ್ಲಿ ಇಲ್ಲಿ ಕೆಲವು ಉದಾಹರಣೆಗಳನ್ನು ಮುಂದಿರಿಸುತ್ತೇನೆ. **"ಟರ್ಕಿಯ ಭವಿಷ್ಯ ಮತ್ತು ಮುಸ್ಲಿಮರ ಕರ್ತವ್ಯ"** ಎಂಬ ವಿಷಯದಲ್ಲಿ ಹಝ್ರತ್ ಮುಸ್ಲಿಹ್ ಮೌಊದ್[ರ] ಒಂದು ಸಲಹೆಯನ್ನು ನೀಡಿದರು ಮತ್ತು ಅದರ ಬಗ್ಗೆ ಅವಲೋಕನ ನಡೆಸಿದರು. ಇದು ಕ್ರಿ.ಶ. 1919, ಎಂದರೆ ಅವರ ಖಿಲಾಫತಿನ ಪ್ರಾರಂಭ ಕಾಲದ ಮಾತಾಗಿದೆ. ಅದೇನೆಂದರೆ, ಟರ್ಕಿ ಸರ್ಕಾರ ಅಪಾಯದಲ್ಲಿದ್ದ ಸಮಯದಲ್ಲಿ ಸಮುದಾಯದ ಏಕತೆಗೆ ಪ್ರತಿಯೊಂದು ಸಂದರ್ಭಗಳಿಂದ ಸಂಪೂರ್ಣವಾದ ಪ್ರಯೋಜನ ಪಡೆಯಲಿಕ್ಕಾಗಿ ಹುಝೂರ್ ಅತ್ಯಂತ ವಿವೇಕಯುತ ಮಾರ್ಗದರ್ಶನವನ್ನು ನೀಡುತ್ತಾ ಕ್ರಿ.ಶ. 1919, ಸೆಪ್ಟೆಂಬರ್ 18ರಂದು ಈ ಪುಸ್ತಕವನ್ನು ಬರೆದರು. ವಿವಿಧ ಚಿಂತನೆಗಳನ್ನು ಹೊಂದಿರುವ ಮುಸ್ಲಿಮರ ಐಕ್ಯ ಮತ್ತು ಒಗ್ಗಟ್ಟಿಗಾಗಿ ಅವರು ಹೀಗೊಂದು ಮಾರ್ಗದರ್ಶಿ ತತ್ವವನ್ನು ಹೇಳಿದರು: ಈ ಸಭೆಯ ಉದ್ದೇಶ ಇಷ್ಟು ಮಾತ್ರವಾಗಿರಬೇಕು. ಅದೇನೆಂದರೆ, ಮುಸ್ಲಿಮ್ ಆಡಳಿತವನ್ನು ತೆಗೆದುಹಾಕುವುದು ಅಥವಾ ಅದಕ್ಕೆ ಕೇವಲ ಒಂದು ರಾಜ್ಯದ ಸ್ಥಾನವನ್ನು ನೀಡುವುದು ಎಂತಹ ಕಾರ್ಯವಾಗಿದೆ ಎಂದರೆ, ಅದನ್ನು ಮುಸ್ಲಿಮ್ ಎಂದು ಕರೆಯಲ್ಪಡುವ ಯಾವುದೇ ಪಂಗಡ ಇಷ್ಟಪಡುವುದಿಲ್ಲ. ಈ ಕುರಿತು ಯೋಚಿಸುವಾಗಲೇ ಸಹಿಸಲು ಸಾಧ್ಯವಾಗುವುದಿಲ್ಲ. ಟರ್ಕಿಯ ಒಳಿತಿಗಾಗಿ ಅವರು ಹೀಗೊಂದು ಸಲಹೆಯನ್ನು ಕೂಡ ನೀಡಿದರು: ಕೇವಲ ಸಭೆಗಳನ್ನು ನಡೆಸುವುದರಿಂದ ಮತ್ತು ಭಾಷಣಗಳಿಂದ ಪ್ರಯೋಜನವಿಲ್ಲ. ಹಣ ಒಟ್ಟುಗೂಡಿಸಿ ಪ್ರಕಟಣೆ ಮತ್ತು ಕರಪತ್ರಗಳನ್ನು ಪ್ರಕಟಿಸುವುದರಿಂದ ಮಾತ್ರ ಲಾಭವಿಲ್ಲ. ಬದಲಾಗಿ ಲೋಕದ ಎಲ್ಲ ದೇಶಗಳಲ್ಲಿ ಕ್ರಮಬದ್ಧವಾದ ಪ್ರಯತ್ನಗಳಿಂದ ಈ ಕಾರ್ಯವನ್ನು ಈಡೇರಿಸಬೇಕು.

(ಇದರ ಬಗ್ಗೆ ಟಿಪ್ಪಣಿ ಮಾಡುತ್ತಾ ಹುಝೂರ್ ಹೇಳಿದರು:) ಇದೇ ಸಂಗತಿಯನ್ನು ಇಂದು ಕೂಡ ಮುಸ್ಲಿಮರು ಯೋಚಿಸಬೇಕಾಗಿದೆ. ಅವರು ಹೇಳಿದ್ದು ಆ ಕಾಲಘಟ್ಟದಲ್ಲಿ ಟರ್ಕಿ

ಸರ್ಕಾರಕ್ಕೆ ಸಂಬಂಧಪಟ್ಟ ವಿಷಯವಾಗಿತ್ತು. ಇಂದು ಹಿಂದಿಗಿಂತ ಹೆಚ್ಚಾಗಿ ಮುಸ್ಲಿಂ ಲೋಕ ಮತ್ತು ಅರಬ್ ಲೋಕ ಈ ಬಗ್ಗೆ ಗಮನ ನೀಡಬೇಕಾದ ಅಗತ್ಯವಿದೆ. ಕೇವಲ ಘೋಷಣೆ ಕೂಗುವುದರಿಂದ ಮತ್ತು ಮೀಟಿಂಗುಗಳನ್ನು ನಡೆಸುವುದರಿಂದ ಪ್ರಯೋಜನವಿಲ್ಲ. ಬದಲಾಗಿ ಕ್ರಿಯಾತ್ಮಕ ಕ್ರಮ ಕೈಗೊಳ್ಳಬೇಕಾಗುವುದು. ತುರ್ಕಿ ಅಥವಾ ಇಸ್ಲಾಮಿನ ವಿರುದ್ಧ ದ್ವೇಷ ಮತ್ತು ಹಗೆಯ ಕಾರಣವನ್ನು ವಿವರಿಸಿಕೊಂಡು ಈ ಸ್ಥಿತಿಯ ಬದಲಾವಣೆಗಾಗಿ ಅವರು ಹೀಗೆ ಮಾರ್ಗದರ್ಶನ ನೀಡಿದರು: ಮುಸ್ಲಿಮರು ತಮ್ಮ ತಪ್ಪುಗಳಿಂದ ಪಶ್ಚಾತ್ತಾಪಪಡುತ್ತಾ ಅಲ್ಲಾಹನ ಕಡೆಗೆ ತಿರುಗಬೇಕು. ಅವರು ಸ್ವತಃ ಇಸ್ಲಾಮನ್ನು ಅರಿಯಬೇಕು. ಅದರ ಸತ್ಯವನ್ನು ಮನವರಿಕೆ ಮಾಡಿಕೊಂಡು ಇತರರಿಗೂ ತಿಳಿಸಿಕೊಡಬೇಕು. ಹೀಗಾದರೆ ಮುಸ್ಲಿಮರಿಗೆ ಉಂಟಾಗುತ್ತಿರುವ ದುಸ್ಥಿತಿ ಮತ್ತು ದೌರ್ಭಾಗ್ಯ ದೂರವಾಗುವುದು. ಒಟ್ಟಿನಲ್ಲಿ ಇದೇ ತತ್ವವನ್ನು ಇಂದು ಕೂಡ ಮುಸ್ಲಿಮರು ಪಾಲಿಸಬೇಕಾಗಿದೆ. ಇಲ್ಲದಿದ್ದರೆ ಇಸ್ಲಾಮಿನ ವಿರೋಧಿಗಳು ಮುಸ್ಲಿಮ್ ರಾಜ್ಯಗಳ ಕಾರ್ಯಕ್ಷೇತ್ರವನ್ನು ಸಂಕುಚಿತಗೊಳಿಸುತ್ತಾ ಹೋಗುವರು. ಈಗಾಗಲೇ ಅವರು ಆ ರೀತಿ ಮಾಡುತ್ತಿದ್ದಾರೆ.

ಮತ್ತೊಂದು ಸಂದರ್ಭದಲ್ಲಿ **ಆಲ್ ಪಾರ್ಟಿ ಕಾನ್ಫರೆನ್ಸ್** ಹುಟ್ಟಿತು. ಆಗ **"ಆಲ್ ಪಾರ್ಟಿ ಕಾನ್ಫರೆನ್ಸ್‌ನ ಕುರಿತು ಒಂದು ಅವಲೋಕನ"** ಎಂಬ ವಿಷಯದಲ್ಲಿ ಹಝ್ರತ್ ಮುಸ್ಲಿಹ್ ಮೌಊದ್(ರ) ನಿರ್ದೇಶನ ನೀಡಿದರು. ಅವರು ಈ ಕಿರುಹೊತ್ತಗೆಯನ್ನು ಕ್ರಿ.ಶ. 1925, ಜೂಲಾಯಿ 13ರಂದು ಬರೆದರು. ಅದರಲ್ಲಿ ಅವರು ಮೊದಲು ಇಸ್ಲಾಮಿನ ಧಾರ್ಮಿಕ ಮತ್ತು ರಾಜಕೀಯ ನಿಲುವನ್ನು ಪ್ರಸ್ತುತಪಡಿಸಿದರು. ರಾಜಕೀಯ ವಿಷಯಗಳಲ್ಲಿ ಮುಸ್ಲಿಮರು ಪೂರ್ಣವಾದ ಐಕ್ಯ ಮತ್ತು ಒಗ್ಗಟ್ಟನ್ನು ತೋರಿಸಬೇಕೆಂಬ ಸುವರ್ಣ ತತ್ವವನ್ನು ಎಲ್ಲ ಮುಸ್ಲಿಂ ಪಂಗಡಗಳ ಮುಂದೆ ಅವರು ಇರಿಸಿದರು. ಏಕೆಂದರೆ ರಾಜಕೀಯವಾಗಿ ನಾವು ಯಾವುದಾದರೂ ಒಂದು ಪಂಗಡವನ್ನು ನಮ್ಮಿಂದ ಬೇರ್ಪಡಿಸಿದರೆ ಅವರು ಇತರ ಸಮುದಾಯಗಳ ಕಡೆಗೆ ಹೋಗದೇ ಇರಲು ಹೇಗೆ ಸಾಧ್ಯ. ಅನಂತರ ಹಝ್ರತ್ ಮುಸ್ಲಿಹ್ ಮೌಊದ್(ರ) ಇಸ್ಲಾಮಿನ ಪ್ರಗತಿ, ಪ್ರಚಾರ ಮತ್ತು ಅದರ ರಾಜಕೀಯ ಸುದೃಢತೆಗಾಗಿ ಕೆಲವು ಸಲಹೆಗಳನ್ನು ನೀಡಿದರು. ಪರಸ್ಪರರ ಧಾರ್ಮಿಕ ವಿಷಯಗಳಲ್ಲಿ ತಲೆಹಾಕದೇ ಇರುವುದು ಶಾಂತಿ ಸ್ಥಾಪನೆಗೆ ಅಗತ್ಯವೆಂದು ಅವರು ಹೇಳಿದರು. ಇತರರ ನಂಬಿಕೆಯ ಪ್ರಕಾರ ಕೆಲಸ ಮಾಡಲು ಸಹನೆಯೊಂದಿಗೆ ಅನುಮತಿಸಬೇಕು ಮತ್ತು ಸ್ವತಃ ತಮ್ಮ ನಂಬಿಕೆಯ ಪ್ರಕಾರ ಕೆಲಸ ಮಾಡಬೇಕು ಎಂದು ಹೇಳಿದರು.

ವ್ಯಾಪಾರ, ಕೈಗಾರಿಕೆ ಮತ್ತು ಉದ್ಯಮದ ಕುರಿತು ಹುಝೂರ್ ಹೀಗೆ ಹೇಳಿದರು: ವ್ಯಾಪಾರ ಎಂಬುದು ಮುಸ್ಲಿಮರು ಅತ್ಯಂತ ಹೆಚ್ಚು ಅಸಡ್ಡೆ ತೋರಿಸಿದ ಒಂದು ವಿಭಾಗವಾಗಿದೆ. ಇತ್ತೀಚೆಗೆ ಈ ವಿಷಯದಲ್ಲಿ ನಾವು ಲೋಕದ ಆಡಳಿತಗಳ ಮತ್ತು ವ್ಯಾಪಾರಿಗಳ ಗುಲಾಮರಾಗಿದ್ದೇವೆ. ಆದ್ದರಿಂದ ಈ ಬಗ್ಗೆಯೂ ಮುಸ್ಲಿಂ ಸರ್ಕಾರಗಳು ಗಮನಹರಿಸಬೇಕಾದ ಅಗತ್ಯವಿದೆ.

ಅವರು ಹೇಳಿದರು: ಕೆಲವು ಮುಸ್ಲಿಂ ದೇಶಗಳಲ್ಲಿ ವಿಶೇಷವಾಗಿ ಅಹ್ಮದಿಯರ ಬಗ್ಗೆ ಕಾಫಿರ್ ಎಂಬ ಭಾವನೆ ಇದೆ. ಅಲ್ಲದೆಯೂ ಪ್ರತಿಯೊಂದು ಪಂಗಡ ಮತ್ತೊಂದು ಪಂಗಡವನ್ನು ಕಾಫಿರ್ ಎಂದು ಹೇಳುತ್ತದೆ. ಮುಸ್ಲಿಮೇತರ ಲೋಕದಲ್ಲಿ ಈ ಕಾರಣದಿಂದಲೇ ಕೆಟ್ಟ ಪ್ರಭಾವ ಉಂಟಾಗುತ್ತಿದೆ ಮತ್ತು ಈ ಸಂಗತಿ ಮುಸ್ಲಿಮರಿಗೆ ನಷ್ಟವನ್ನು ಉಂಟುಮಾಡುತ್ತಿದೆ. ಒಟ್ಟಿನಲ್ಲಿ, ಈ ಅಂಶವನ್ನು ಇಂದು ಕೂಡ ಮುಸ್ಲಿಮ್ ಸರ್ಕಾರಗಳು ಮತ್ತು ಮುಸ್ಲಿಮರು ಮನವರಿಕೆ ಮಾಡಬೇಕಾಗಿದೆ.

ಭಾರತ ಮತ್ತು ಪಾಕಿಸ್ತಾನದ ಅಂದಿನ ಸ್ಥಿತಿಗತಿಗಳ ಕುರಿತು ಒಂದು **ರೌಂಡ್ ಟೇಬಲ್ ಕಾನ್ಫರೆನ್ಸ್** ನಡೆದಿತ್ತು. ಅದರಲ್ಲಿ ಮುಸ್ಲಿಮರ ಪ್ರಾತಿನಿಧ್ಯದ ಪ್ರಶ್ನೆ ಎದ್ದಿತ್ತು. ಹಝ್ರತ್ ಮುಸ್ಲಿಹ್ ಮೌಊದ್(ರ) ಈ ಸಂದರ್ಭದಲ್ಲಿ ಸರ್ಕಾರಕ್ಕೆ ಹೀಗೆ ಸಲಹೆ ನೀಡಿದರು: ಕಾನ್ಫರೆನ್ಸ್‌ನ ತೀರ್ಮಾನಗಳನ್ನು ಜನರು ಸಂತೋಷದಿಂದ ಸ್ವೀಕಾರ ಮಾಡುವಂತಾಗಲು ರಾಜಕೀಯ ಪಕ್ಷಗಳು ಸಮಾಲೋಚಿಸಿ ಪ್ರತಿನಿಧಿಗಳನ್ನು ಆಯ್ಕೆ ಮಾಡಬೇಕು. ಭಾರತದ ಅಂದಿನ ರಾಜಕೀಯ ಸಮಸ್ಯೆಗಳ ಪರಿಹಾರದ ಕುರಿತು ಅವರು ಒಂದು ಲೇಖನವನ್ನು ಬರೆದರು. ಹುಝೂರ್ ಈ ಅವಲೋಕನದಲ್ಲಿ ಮುಸ್ಲಿಮರ ಹಕ್ಕುಗಳು ಮತ್ತು ಬೇಡಿಕೆಗಳ ಬಗ್ಗೆ ವಿಶದವಾಗಿ ಚರ್ಚಿಸಿದರು ಮತ್ತು ಅವುಗಳ ಯುಕ್ತಿಯನ್ನು ಸ್ಪಷ್ಟಪಡಿಸಿದರು. ಅದರ ಜೊತೆಗೆ ಅವರು ಭಾರತದ ರಾಜಕೀಯ ಸಮಸ್ಯೆಗಳ ಬಗ್ಗೆ ಅತ್ಯಂತ ಯುಕ್ತಿಪೂರ್ಣ ಹಾಗೂ ತೃಪ್ತಿದಾಯಕ ಪರಿಹಾರವನ್ನು ಮುಂದಿರಿಸಿದರು. **ರೌಂಡ್ ಟೇಬಲ್ ಕಾನ್ಫರೆನ್ಸ್**ನಲ್ಲಿ ಭಾಗವಹಿಸುವವರು ಈ ಅವಲೋಕನವನ್ನು ಓದಿ ಪ್ರಯೋಜನ ಪಡೆಯಲಿಕ್ಕಾಗಿ ಕೂಡಲೇ ಅದರ ಆಂಗ್ಲ ಅನುವಾದವನ್ನು ಪ್ರಕಟಿಸಲು ಕಳುಹಿಸಿದರು. ಮುಸ್ಲಿಂ ಪ್ರತಿನಿಧಿಗಳಿಗೆ ಇದರಿಂದ ವಿಶೇಷವಾಗಿ ಪ್ರಯೋಜನ ಉಂಟಾಯಿತು. ಅವರ ಈ ಗ್ರಂಥ ಭಾರತ ಮತ್ತು ಇಂಗ್ಲಂಡ್ ಎರಡೂ ಜಾಗಗಳಲ್ಲಿ ಬಹಳ ಜನಪ್ರಿಯವಾಯಿತು. ಅದನ್ನು ಬಹಳ ಶ್ರದ್ಧೆಯಿಂದ ಮತ್ತು ಆಸಕ್ತಿಯಿಂದ ಓದಲಾಯಿತು. ಅನೇಕ ರಾಜಕೀಯ ನಾಯಕರು ಮತ್ತು ಲೇಖಕರು ಅತ್ಯುತ್ತಮ ಮಾತುಗಳಲ್ಲಿ ಹಝ್ರತ್ ಮುಸ್ಲಿಹ್ ಮೌಊದ್(ರ)ರಿಗೆ ಮೆಚ್ಚುಗೆ ಸೂಚಿಸಿದರು.

(ಅನಂತರ ಹುಝೂರ್ ಈ ಅವಲೋಕನಕ್ಕೆ ಸಂಬಂಧಪಟ್ಟು **ತಾರೀಖೆ ಅಹ್ಮದಿಯ್ಯತ್ತಿ**ನಲ್ಲಿ ಉಲ್ಲೇಖಿಸಿರುವ ಘಟನೆಗಳಲ್ಲಿ ಕೆಲವನ್ನು ಉದಾಹರಣೆಯಾಗಿ ಮುಂದಿರಿಸಿದರು.) ಕರಾಚಿಯ ಸರ್ ಅಬ್ದುಲ್ಲಾಹ್ ಹಾರೂನ್ ಎಂ.ಎಲ್.ಎ. ಹೇಳುತ್ತಾರೆ: ನನ್ನ ಅಭಿಪ್ರಾಯದಲ್ಲಿ, ರಾಜಕೀಯ ವಿಷಯದಲ್ಲಿ ಬರೆಯಲಾಗಿರುವ ಪುಸ್ತಕಗಳಲ್ಲಿ **"ಹಿಂದೂಸ್ತಾನದ ರಾಜಕೀಯ ಸಮಸ್ಯೆಗಳ ಪರಿಹಾರ"** ಎಂಬ ಪುಸ್ತಕ ಅತ್ಯುತ್ತಮ ಪುಸ್ತಕಗಳಲ್ಲಿ ಒಂದಾಗಿದೆ.

ಲೋಕದ ಪ್ರಸ್ತುತ ಅಸಮಾಧಾನಕ್ಕೆ ಇಸ್ಲಾಂ ಮುಂದಿರಿಸುವ ಪರಿಹಾರ ಎಂಬುದರ ಕುರಿತು ಕೂಡ ಹಝ್ರತ್ ಮುಸ್ಲಿಹ್ ಮೌಊದ್(ರ) ಬರೆದಿರುವರು. ಜಾಗತಿಕ ಶಾಂತಿಯನ್ನು ದೃಷ್ಟಿಯಲ್ಲಿರಿಸಿಕೊಂಡು ಅವರು ಈ ಜ್ಞಾನಭರಿತ ಭಾಷಣವನ್ನು ಕ್ರಿ.ಶ. 1946, ಅಕ್ಟೋಬರ್ 9ರಂದು ದೆಹಲಿಯಲ್ಲಿ ಮಾಡಿದ್ದರು.

ಇಸ್ಲಾಮಿನ ಸಂವಿಧಾನದ ಕುರಿತು ಹಝ್ರತ್ ಮುಸ್ಲಿಹ್ ಮೌಊದ್(ರ) ತಮ್ಮ ಚಿಂತನೆಯನ್ನು ವ್ಯಕ್ತಪಡಿಸಿದ್ದರು. ಆ

ಉಪನ್ಯಾಸವನ್ನು ಜನಸಾಮಾನ್ಯರ ಪ್ರಯೋಜನಕ್ಕಾಗಿ ಕ್ರಿ.ಶ. 1948, ಫೆಬ್ರವರಿ 18ರಂದು ಒಂದು ಕಿರು ಹೊತ್ತಗೆಯ ರೂಪದಲ್ಲಿ ಪ್ರಕಟಿಸಲಾಗಿತ್ತು. ಆ ಭಾಷಣದಲ್ಲಿ ಇಸ್ಲಾಮಿನ ಸಂವಿಧಾನದ ಬಗ್ಗೆ ವಿವರಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್(ರ) ಹೀಗೆ ಹೇಳಿದರು: ಸರ್ಕಾರದ ಸಂವಿಧಾನ ಪೂರ್ಣವಾಗಿ ಇಸ್ಲಾಮಿನದ್ದು ಆಗಲಾರದು. ಏಕೆಂದರೆ ಅದು ಸಾಧ್ಯವೇ ಅಲ್ಲ. ಆದರೆ ಆಡಳಿತದ ಕಾರ್ಯವಿಧಾನ ಇಸ್ಲಾಮಿನ ಪ್ರಕಾರ ಆಗಬಹುದಾಗಿದೆ. ಮುಸ್ಲಿಮರಿಗೆ ಸಂಬಂಧಪಟ್ಟು ಅವರಿಗೆ ಇಸ್ಲಾಮಿಕ ನಿಯಮ ಆಗಬಹುದು. ಇದನ್ನೇ ಇಸ್ಲಾಂ ಆವಶ್ಯಪಡುತ್ತದೆ. ಆದರೆ ಹಿಂದೂ, ಕ್ರೈಸ್ತ ಮತ್ತು ಯಹೂದಿಯರು ಕೂಡ ಇಸ್ಲಾಮಿನ ಪ್ರಕಾರ ನಡೆಯಬೇಕು ಎಂದು ಇಸ್ಲಾಂ ಹೇಳುವುದಿಲ್ಲ. ಬದಲಾಗಿ ಅದನ್ನು ಇಸ್ಲಾಂ ವಿರೋಧಿಸುತ್ತದೆ.

ಅನಂತರ ಹಝ್ರತ್ ಮುಸ್ಲಿಹ್ ಮೌಊದ್(ರ) ರಶ್ಯ ಮತ್ತು ಅಂದಿನ ಯುದ್ಧಕ್ಕೆ ಸಂಬಂಧಪಟ್ಟು ಎರಡನೇ ಮಹಾಯುದ್ಧದಲ್ಲಿ ರಶ್ಯ ಪೋಲೆಂಡಿನೊಳಗೆ ನುಗ್ಗಿದ್ದ ಕುರಿತು ವಿಶ್ಲೇಷಣೆ ನಡೆಸಿದರು. ಎರಡನೇ ಮಹಾಯುದ್ಧದ ವೇಳೆ ರಶ್ಯ ಪೋಲೆಂಡಿಗೆ ನುಗ್ಗಿದ್ದಾಗ ಹಝ್ರತ್ ಮುಸ್ಲಿಹ್ ಮೌಊದ್(ರ) ಒಂದು ಲೇಖನವನ್ನು ಬರೆದರು. ಅವರು ಈ ಲೇಖನದಲ್ಲಿ ರಶ್ಯ ಪೋಲೆಂಡಿಗೆ ನುಗ್ಗಲು ಇರುವ ಕಾರಣಗಳು ಮತ್ತು ಉದ್ದೇಶಗಳ ಬಗ್ಗೆ ಅವಲೋಕನ ನಡೆಸಿದರು.

ಅಂತರ್‌ರಾಷ್ಟ್ರೀಯ ಸ್ಥಿತಿಗಳ ಬಗ್ಗೆಯೂ ಅವರಿಗೆ ಆಳವಾದ ಅರಿವಿತ್ತು. ಈ ಸಂಬಂಧಪಟ್ಟು ಅವರ ಇನ್ನಷ್ಟು ಲೇಖನಗಳು ಇವೆ. ಧಾರ್ಮಿಕ ಸಾಹಿತ್ಯಗಳು, ವ್ಯಾಖ್ಯಾನಗಳು ಅಪಾರ ಸಂಖ್ಯೆಯಲ್ಲಿವೆ. ಅವರ ಜುಮಾ ಖುತ್ಬಗಳು, ಜಮಾಅತಿನ ಜಲ್ಸಗಳಲ್ಲೂ ಇತರ ಸಂದರ್ಭಗಳಲ್ಲೂ ಮಾಡಿದ ಭಾಷಣಗಳು ಸಹ ಅರಿವು ಮತ್ತು ಜ್ಞಾನದ ಒಂದು ಭಂಡಾರವಾಗಿದೆ.

ಒಟ್ಟಾರೆ ಹೇಳುವುದಾದರೆ, ಅಲ್ಲಾಹನು ಹಝ್ರತ್ ಮಸೀಹ್ ಮೌಊದ್(ಅ)ರಿಗೆ ಭವಿಷ್ಯವಾಣಿಯಲ್ಲಿ ವಾಗ್ದಾನ ಮಾಡಿದ್ದನ್ನು ಎಲ್ಲ ರೀತಿಯಲ್ಲೂ ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್ ಸಾಹಿಬ್(ರ) ಪೂರ್ತಿ ಮಾಡಿ ತೋರಿಸಿದರು. ಕೆಲವು ಉದಾಹರಣೆಗಳನ್ನು ನಾನು ಈಗ ನಿಮಗೆ ನೀಡಿದ್ದೇನೆ. ಅವರ ಅರಿವು ಮತ್ತು ಪರಿಜ್ಞಾನದ ಈ ಸಾಹಿತ್ಯಗಳನ್ನು ನಾವು ಓದಲು ಪ್ರಯತ್ನಿಸಬೇಕು. ಅವರ ಅನೇಕ ಮಾತುಗಳು ಇತ್ತೀಚಿನ ಸ್ಥಿತಿಗಳಿಗೆ ಅನುಸಾರವಾಗಿವೆ. ಅವುಗಳಿಂದ ನಾವು ಪ್ರಯೋಜನ ಪಡೆಯಬಹುದಾಗಿದೆ. ಅಲ್ಲಾಹನು ಅದರ ಸೌಭಾಗ್ಯ ನೀಡಲಿ.

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَاْمُرُ بِالْعَدْلِ وَالْاِحْسَانِ وَاِيْتَآءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis***(*atba*)

At, ***'Masjid Mubarak'***, *Islamabad*, *Tilford*, U.K. On 21-02-2025

**Summarized by** *Majlis Ansarullah Bharat*

***Kannada Translation****:* Moulavi Inamullah for Kannada Desk, Qadian

***Reviewed by****:* M.P Ibrahim | ***Layout****:* Basheer K.P. Manjeshwar

***Published By****:* Kannada Isha'at Team for Nazarath Nashr-O-Isha'ath, Qadian

***Email****:* *khutuba.kannada@gmail.com*

**You can find all the Sermons archived at**: www.alislam.org/friday-sermon